ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಖಾನಾಪೂರ.

**ಸಿ.ಸಿ ನಂ:330/2021**

ಪಿ.ಡಬ್ಲ್ಯೂ-**3**
ಸಿ.ಡಬ್ಲ್ಯೂ-**6**

| | | |
|---|---|---|
| ಹೆಸರು | : | ದುಲುಬಾ ಲಕ್ಷ್ಮಣ ಮಿರಾಜಿ |
| ವಯಸ್ಸು | : | **50** ವರ್ಷ |
| ಉದ್ಯೋಗ | : | ಸೆಂಟ್ರಿಂಗ್ ಕೆಲಸ |
| ವಾಸ | : | ಲೊಂಡಾ |

ದಿನಾಂಕ 04-09-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

2018 ರ ಸಾಲಿನಲ್ಲಿ ನಾನು ವೈಯುಕ್ತಿಕ ಕೆಲಸ ಇದ್ದುದ್ದರಿಂದ ಅಳ್ನಾವರಕ್ಕೆ ಹೋಗಿ ವಾಪಸ್ಸು ರಾಮನಗರದ ಕಡೆಯಿಂದ ನಮ್ಮ ಊರಿಗೆ ವಾಪಸ್ಸಾಗುತ್ತಿದ್ದು ರಾಮನಗರ ಕುಂಬರ್ಡಾ ಮಧ್ಯದ ರಸ್ತೆಯಲ್ಲಿ ಮೋಟಾರ್ ವಾಹನ ಚಾಲಕನು ರಸ್ತೆಯ ಮೇಲೆ ಬಿದ್ದಿದ್ದನ್ನು ನೋಡಿ ನಾನು ಸದರಿ ಸ್ಥಳಕ್ಕೆ ಹೋಗಿದ್ದು ಸದರಿ ಬೈಕ ಸವಾರ ನ ಹೆಸರು ಮತ್ತು ವಿಳಾಸ ಗೊತ್ತಾಗಿದ್ದು ಸದರಿ ಸ್ಥಳಕ್ಕೆ ಅವರ ಸಂಬಂಧಿಕರು ಬಂದಿದ್ದು ನಂತರ ಅವರನ್ನು ಚಿಕಿತ್ಸೆಗೆ ಅಂಬೂಲನ್ಸನಲ್ಲಿ ಕಳುಹಿಸಿಕೊಟ್ಟಿರುತ್ತೇವೆ. ಟೆಂಪೊದ ಚಾಲಕನ ತಪ್ಪಿ ನಿಂದ ಅಪಘಾತವಾಗಿರುವುದು ನನಗೆ ತಿಳಿದುಬಂದಿರುತ್ತದೆ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

***(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)***

ಪಾಟೀ ಸವಾಲುಃ ಸಸಅ ರವರಿಂದ

ದಿನಾಂಕ 10.12.2020 ರಂದು ನಾನು ನನ್ನ ವೈಯುಕ್ತಿಕ ಕೆಲಸದ ಕಾರಣ ಅಳ್ನಾವರಕ್ಕೆ ಹೋಗಿ ನಮ್ಮ ಊರಿಗೆ ಬರುತ್ತಿದ್ದಾಗ ನನ್ನ ಮುಂದೆ ಕೆ.ಎ.65 ಜೆ.1093 ರಲ್ಲಿ ಮೋಟಾರ್ ಸೈಕಲ್ ಸವಾರರಿಬ್ಬರು ಮುಂದವಾಡ ಗ್ರಾಮದ ಹದ್ದಿನಲ್ಲಿರುವ ಗಾರ್ಲಿ ಕ್ರಾಸ್ ಹತ್ತಿರ ನಮ್ಮ ಸೈಡ್ ನಲ್ಲಿ ಹೋಗುತ್ತಿದ್ದಾಗ ಎದುರುಗಡೆಗೆ ಆರೋಪಿಯು ಗೂಡ್ಸ ವಾಹನವನ್ನು ಅತಿವೇಗ ಹಾಗೂ

ನಿಷ್ಕಾಳಜಿತದಿಂದ ಓಡಿಸಿಕೊಂಡು ಬಂದು ಡಿಕ್ಕಿಪಡಿಸಿ ಅಪಘಾತ ಪಡಿಸಿರುತ್ತಾನೆಂದರೆ ಸಾಕ್ಷಿದಾರ ನಾನು ಸುಮಾರು ದೂರಿನಿಂದ ಅಪಘಾತವನ್ನು ನೋಡಿರುತ್ತೇನೆಂದು ಉತ್ತರಿಸುತ್ತಾರೆ. ನಂತರ ನಾನು ಮೋಟಾರ್ ಸೈಕಲನ್ನು ಸೈಡನಲ್ಲಿ ನಿಲ್ಲಿಸಿ ಹೋಗಿ ನೋಡಲಾಗಿ ಮೋಟಾರ ಸೈಕಲ ನಡೆಸುತ್ತಿದ್ದ ವಿಜಯ ತುಕಾರಾಮ ಮಿರಾಶಿಗೆ ತಲೆಗೆ ಹಾಗೂ ಬಲಗಾಲಿಗೆ ಭಾರಿ ಪೆಟ್ಟಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದ ಎಂದರೆ ಸರಿ. ಹಿಂದಿನ ಸವಾರನಿಗೆ ಸಹ ತಲೆಗೆ ಪೆಟ್ಟಾಗಿ ರಸ್ತೆಯ ಬದಿ ಬಿದ್ದಿದ್ದರು ಎಂದರೆ ಸರಿ. ಸದರಿಯವನಿಗೆ ಬಲಗಾಲು ಕಟ್ ಆಗಿ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ ಎಂದರೆ ಸರಿ. ಅಪಘಾತವಾದಾಗ ಸಮಯ 4.30 ಆಗಿತ್ತು ಎಂದರೆ ಸರಿ. ಮೋಟಾರ್ ಸೈಕಲ್ ಬಲಗಡೆಯ ಹೆಡ್ ಲೈಟ್, ಬಲಗಡೆಯ ಬಂಪರ್ ಡ್ಯಾಮೇಜ್ ಆಗಿತ್ತು ಎಂದರೆ ಸರಿ. ಅದೇ ರೀತಿ ಗೂಡ್ಸ ವಾಹನದ ಬಲಗಡೆಯ ಹೆಡ್ ಲೈಟ್, ಬಂಪರ ಹಾಗೂ ಡೋರ್ ಡ್ಯಾಮೇಜ ಆಗಿತ್ತು ಎಂದರೆ ಸರಿ. ಸದರಿ ಗೂಡ್ಸ ವಾಹನದ ಚಾಲಕನನ್ನು ವಿಚಾರಿಸಿದಾಗ ಆತನ ಹೆಸರು ಮತ್ತು ವಿಳಾಸ ತಿಳಿಸಿರುತ್ತಾನೆಂದರೆ ಸರಿ. ನಂತರ ಅಪಘಾತದಲ್ಲಿ ಗಾಯಗೊಂಡವರನ್ನು ಅಂಬೂಲನ್ಸಗೆ ಕರೆ ಮಾಡಿ ಚಿಕಿತ್ಸೆಗೆ ಕಳುಹಿಸಿಕೊಟ್ಟಿರುತ್ತೇವೆಂದರೆ ಸರಿ. ಗಾಯಾಳು ಸಹ ಚಿಕಿತ್ಸೆಗೆ ಕರೆದುಕೊಂಡು ಹೋಗುತ್ತಿರುವಾಗ ಮರಣ ಹೊಂದಿರುವ ವಿಚಾರ ಗೊತ್ತಾಗಿರುತ್ತದೆಯೆಂದರೆ ಸರಿ. ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಸ್.ಎಸ್.ಎಂ ವಕೀಲರಿಂದ

ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಗಳು ನನ್ನ ಜೊತೆ ಕೆಲಸ ಮಾಡುತ್ತಿರಲಿಲ್ಲ. ಮೃತ ಮೀರಾಶಿ ನನ್ನ ಸಂಬಂಧಿಕನಾಗಬೇಕು ಎಂದರೆ ಸರಿ. ನಾನು 3.30 ಗಂಟೆಗೆ ಅಳ್ನಾವರದಲ್ಲಿ ಕೆಲಸ ಮುಗಿಸಿಕೊಂಡು ವಾಪಸ್ಸು ಹೊರಟಿರುತ್ತೇನೆ. ನಾನು ಸ್ಥಳಕ್ಕೆ ಹೋಗುವ ಮೊದಲೇ ಅಪಘಾತವಾಗಿತ್ತು ಎಂದರೆ ಸರಿ. ಆದುದರಿಂದ ಅಪಘಾತ ಹೇಗೆ, ಯಾವರೀತಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ದೂರದಿಂದ ನೋಡಿರುತ್ತೇನೆಂದು ಉತ್ತರಿಸುತ್ತಾರೆ. ಸುಮಾರು 100 ಮೀಟರ್ ದೂರದಿಂದ ನೋಡಿರುತ್ತೇನೆ. ಅಪಘಾತವಾದ 10 ನಿಮಿಷದ ನಂತರ ನಾನು ಸದರಿ ಸ್ಥಳಕ್ಕೆ ಹೋಗಿರುತ್ತೇನೆ. ರಾಮನಗರ ಅಳ್ನಾವರ ರಸ್ತೆಯಲ್ಲಿ ಅಳ್ನಾವರದ ಕಡೆಗೆ ಏರು ಮುಖದ ರಸ್ತೆ, ರಾಮನಗರದ ಕಡೆಗೆ ಇಳಿಜಾರು ರಸ್ತೆ ಇರುತ್ತದೆಯೆಂದರೆ ಸರಿ. ಆದುದರಿಂದ ರಾಮನಗರದಿಂದ ಅಳ್ನಾವರದ ಕಡೆಗೆ ಹೋಗುವ ಗಾಡಿಗಳು ನಿಧಾನವಾಗಿ ಹೋಗುತ್ತವೆ ಎಂದರೆ ಸರಿ. ಆದರೆ ಆ ದಿನ ಗೂಡ್ಸ ವಾಹನ ಜೋರಾಗಿ ಬಂದಿರುತ್ತದೆಯೆಂದು ಉತ್ತರಿಸುತ್ತಾರೆ. ಅಳ್ನಾವರದ ಕಡೆಯಿಂದ ರಾಮನಗರದ ಕಡೆಗೆ ಇಳಿಜಾರಿನ ರಸ್ತೆ ಇರುವುದರಿಂದ ಎಲ್ಲಾ ವಾಹನಗಳು ವೇಗವಾಗಿ

ಬರುತ್ತವೆ ಎಂದರೆ ಸರಿ. ಮೃತ ಮಿರಾಶಿರವರು ತಮ್ಮ ಮೋಟಾರ್ ಸೈಕಲನ್ನು ರಾಮನಗರದ ಕಡೆಗೆ ಅತಿವೇಗವಾಗಿ ಓಡಿಸಿಕೊಂಡು ಬಂದು ತಿರುವಿನಲ್ಲಿ ಎದುರುಗಡೆಯಿಂದ ಬರುತ್ತಿದ್ದ ಗೂಡ್ಸ ವಾಹನಕ್ಕೆ ಡಿಕ್ಕಿಪಡಿಸಿ ಸ್ವತಃ ಅಪಘಾತಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಬೈಕಸವಾರನ ತಪ್ಪಿ ನಿಂದಲೇ ಅಪಘಾತವಾಗಿರುತ್ತದೆಯೆಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರು ಮರುದಿನ ನನ್ನ ಹೇಳಿಕೆಯನ್ನು ಅಪಘಾತ ಸ್ಥಳದಲ್ಲಿ ಪಡೆದುಕೊಂಡಿರುತ್ತಾರೆ. ಪೋಲೀಸರು ನನ್ನಿಂದ ಹೇಳಿಕೆ ಪಡೆದುಕೊಳ್ಳದೇ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲದಿದ್ದರೂ ಮೃತ ಮಿರಾಶಿರವರು ನನ್ನ ಸಂಬಂಧಿಕರಾದ ಕಾರಣ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೃತ ಮಿರಾಶಿರವರ ವಾಹನಕ್ಕೆ ಇನ್ಸೂರನ್ಸ ಹಾಗೂ ಲೈಸನ್ಸ ಇರದ ಕಾರಣ ಆರೋಪಿಯ ವಾಹನದ ಮೇಲೆ ಸುಳ್ಳು ದೂರನ್ನು ನೀಡಲಾಗಿರುತ್ತದೆಯೆಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಮೃತ ವ್ಯಕ್ತಿಗೆ ಸಹಾಯ ಮಾಡುವ ಕಾರಣದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.